**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ ನಂಜನಗೂಡು**

**ಸಿ.ಸಿ. ನಂ.1681/2018**

ಪಿರ್ಯಾದಿದಾರರು : ಕವಲಂದೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ ನಿಸಾರ್ ಅಹಮದ್ ಬಿನ್ ಲೇಟ್ ಮಹಮದ್ ಗೌಸ್

ವಾಸಃ ದೊಡ್ಡ ಕವಲಂದೆ ಗ್ರಾಮ, ನಂಜನಗೂಡು ತಾಲ್ಲೂಕು

**::ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆ::**

ಪ್ರಶ್ನೆ 1- ಈ ಪ್ರಕರಣದಲ್ಲಿಯ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿಸಿಕೊಂಡಿದ್ದೀರಾ?

**ಆರೋಪಿ ಉತ್ತರ-**

ಪ್ರಶ್ನೆ 2-ಪ್ರಾಸಾ-3-ರವಿಕುಮಾರ ಎಂ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 20.08.2018 ರಂದು ಪ್ರಕರಣದ ಕಡತವನ್ನು ಚಾಸಾ 6 ರವರಿಂದ ಪಡೆದು ಪರಿಶೀಲಿಸಿ ಅದೇ ದಿನ ಕೃತ್ಯ ನಡೆದ ಸ್ಥಳದ ಆರ್.ಟಿ.ಸಿ ಯನ್ನು ಕೋರಿ ಕವಲಂದೆ ಉಪ ತಹಸೀಲ್ದಾರ್ ರವರಿಗೆ ಮನವಿ ಮಾಡಿರುತ್ತೇನೆ. ದಿಃ 21.08.2018 ರಂದು ಉಪ ತಹಸೀಲ್ದಾರ್ ರವರಿಂದ ಆರ್.ಟಿ.ಸಿಯನ್ನು ಪಡೆದಿರುತ್ತೇನೆ. ನಂತರ ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ಧ ಮಾನ್ಯ ಘನ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಆರೋಪಿ ಉತ್ತರ-**

ಪ್ರಶ್ನೆ-3- ಪ್ರಾಸಾ.4 -ಶ್ರೀ.ಕೆ ಮಹೇಶ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 26.07.2018 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಂಜೆ 18.30 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 110/2018 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯು ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿಃ 27.07.2018 ರಂದು ಕೃತ್ಯ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1, 4 ಮತ್ತು 5 ರವರನ್ನು ಸ್ಥಳಕ್ಕೆ ಬರ ಮಾಡಿಕೊಂಡು ಚಾಸಾ.4 ಮತ್ತು 5 ರವರಿಗೆ ಮಹಜರ್ ಗೆ ಸಹಕರಿಸುವಂತೆ ನೋಟಿಸು ಜಾರಿ ಮಾಡಿ ಚಾಸಾ-1 ರವರು ಕೃತ್ಯ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಚಾಸಾ-4 ಮತ್ತು 5 ರವರ ಸಮಕ್ಷಮ ಕೃತ್ಯ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತೇನೆ. ಚಾಸಾ.2 ಮತ್ತು 3 ರವರ ಹೇಳಿಕೆ ಪಡೆದಿರುತ್ತೇನೆ. ದಿಃ 07.08.2018 ರಂದು ಆರೋಪಿಗೆ ಕಲಂ 41(ಎ) ಸಿ.ಆರ್.ಪಿ.ಸಿ ಅಡಿಯಲ್ಲಿ ನೋಟಿಸನ್ನು ಜಾರಿ ಮಾಡಿರುತ್ತೇನೆ. ದಿಃ 20.08.2018 ರಂದು ಉಪ ತಹಸೀಲ್ದಾರ್ ರವರಿಗೆ ಚಾಸಾ 1 ರವರ ಬಾಬ್ತು ಜಮೀನಿಗೆ ಸಂಬಂಧಿಸಿದಂತೆ ಆರ್.ಟಿ.ಸಿ ಯನ್ನು ನೀಡುವಂತೆ ಮನವಿ ಮಾಡಿರುತ್ತೇನೆ. ನಂತರ ಈ ಪ್ರಕರಣದ ಕಡತವನ್ನು ಚಾಸಾ-7 ರವರಿಗೆ ಹಸ್ತಾಂತರಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ?

**ಆರೋಪಿ ಉತ್ತರ-**

ಪ್ರಶ್ನೆ 4-ಈ ಪ್ರಕರಣದಲ್ಲಿ ತಾವೇನಾದರೂ ಹೇಳಲಿಕ್ಕೆ ಇದೆಯೇ?

**ಆರೋಪಿ ಉತ್ತರ-**

ಪ್ರಶ್ನೆ 5- ತಮ್ಮ ಪರವಾಗಿ ಸಾಕ್ಷ್ಯ ವಿಚಾರಣೆ ಅಥವಾ ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸುವುದಕ್ಕೆ ಇದೆಯೇ?

**ಆರೋಪಿ ಉತ್ತರ-**

(ಆರೋಪಿತರಿಗೆ ಹೇಳಿಕೆಯನ್ನು ಅವರಿಗೆ ತಿಳಿಯುವ ಹಾಗೆ ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಅದನ್ನು ತಿಳಿದುಕೊಂಡು ನಂತರ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಯಿತು)

ದಿನಾಂಕ:26.02.2026

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು